# ಕರ್ನಾಟಕ ಸರ್ಕಾರ

ವಿಶೇಷ ನೇಮಕಾತಿ ಸಮಿತಿ
ಮುಖ್ಯ ಇಂಜಿನಿಯರ್ ರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ,
ಆನಂದರಾವ್ ವೃತ್ತ, ಬೆಂಗಳೂರು-560 009.

ಸಂ: ಮುಇಂ:ಪಂರಾಇಂಇ:ಬೆಂ:ಸಿ-8:ಸಇಂ-ಕಿಇಂ-ನೇ.ನೇಮ:2014-15 ದಿನಾಂಕ: 07/01/2015

## ತಿದ್ದುಪಡಿ ಅಧಿಸೂಚನೆ

1) ವೆಬ್‌ಸೈಟ್‌ನಲ್ಲಿ ಬಿತ್ತರಿಸಿರುವ ದಿನಾಂಕ 06/01/2015ರ ಅಧಿಸೂಚನೆ ಪುಟ(9)ರಲ್ಲಿ ಹೆಚ್ಚಿನ ವಿವರಗಳಿಗೆ ದಿನಾಂಕ 06/01/2015ರಂದು ಪ್ರಕಟಿಸಿರುವ ಕರ್ನಾಟಕ ರಾಜ್ಯ ವಿಶೇಷ ರಾಜ್ಯ ಪತ್ರದಲ್ಲಿನ ಅಧಿಸೂಚನೆಯನ್ನು ನೋಡಬಹುದೆಂದು ತಿಳಿಸಲಾಗಿದೆ. ಆದರೆ ಗೆಜೆಟ್ ಪ್ರಕಟಿಸುವ ಅಧಿಕಾರಿಗಳು ದಿನಾಂಕ 06/01/2015ರಂದು ಪ್ರಕಟಿಸಲು ಸಾಧ್ಯವಿಲ್ಲವೆಂದು ತಿಳಿಸಿ ದಿನಾಂಕ 08/01/2015ರಂದು ಪ್ರಕಟಿಸುವುದಾಗಿ ತಿಳಿಸಿರುವುದರಿಂದ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗೆ ದಿನಾಂಕ 08/01/2015ರಂದು ಪ್ರಕಟಗೊಳ್ಳಲಿರುವ ಕರ್ನಾಟಕ ರಾಜ್ಯಪತ್ರಿಕೆಯಲ್ಲಿನ ಅಧಿಸೂಚನೆಯನ್ನು ನೋಡಬಹುದಾಗಿದೆ.

2) ಹಾಗೆಯೇ ದಿನಾಂಕ 06/01/2015ರ ಅಧಿಸೂಚನೆಯ ಕೊನೆಯ ಪುಟದಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 27/01/2015 ಎಂದು ಇರುವುದನ್ನು ದಿನಾಂಕ 29/01/2015 ಎಂದು ಹಾಗೂ ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ 28/01/2015 ಎಂದು ಇರುವುದನ್ನು ದಿನಾಂಕ 30/01/2015 ಎಂದು ಅಭ್ಯರ್ಥಿಗಳು ಓದಿಕೊಳ್ಳತಕ್ಕದ್ದು.

3) ಅಧಿಸೂಚನೆಯ ಪುಟ(11)ರಲ್ಲಿ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದು ಎಂದು ತಿಳಿಸಲಾಗಿದ್ದು, ಈ ದೂರವಾಣಿ ಸಂಖ್ಯೆಗಳನ್ನು ಕೆಲಸದ ದಿನಗಳಂದು ಕಛೇರಿ ವೇಳೆಯಲ್ಲಿ (ಬೆಳಿಗ್ಗೆ 10.00ರಿಂದ ಸಂಜೆ 5.30 ಗಂಟೆಯವರೆಗೆ) ಮಾತ್ರ ಸಂಪರ್ಕಿಸಬಹುದಾಗಿದೆ. ಜೊತೆಗೆ ಮತ್ತೊಂದು ದೂರವಾಣಿ ಸಂಖ್ಯೆ 9035714037ನ್ನು ಸಹ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಸದಸ್ಯ ಕಾರ್ಯದರ್ಶಿ
ವಿಶೇಷ ನೇಮಕಾತಿ ಸಮಿತಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಬೆಂಗಳೂರು.